ಶ್ರೀ ಎ.ವೀರಕುಮಾರ್ ಪಾಟೀಲ್: ನಾನು ಆರ್ಡರ್ಸನ್ನು ನೋಡಿ ಅಂತಹ ತಪ್ಪುಗಳಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಇಲ್ಲದಿದ್ದರೆ ಅದನ್ನು ನಾನು ಸರಿಪಡಿಸುತ್ತೇನೆ.

ಅಧ್ಯಕ್ಷರು: ಆಯಿತು, ಕ್ರಮವನ್ನು ಕೈಗೊಳ್ಳುತ್ತಾರೆಂದು ಅವರು ಹೇಳಿರುತ್ತಾರೆ.

ಇತರ ಇಲಾಖೆಗಳಿಗೆ ಪೋಲೀಸ್ ಅಧಿಕಾರಿಗಳ ನಿಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 78(1177)

ಸದಸ್ಯರ ಹೆಸರು: ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)

ಪ್ರಶ್ನೆ

ಅ) ಪೊಲೀಸ್ ಇಲಾಖೆಯ ಯಾವ ಯಾವ ದರ್ಜೆಯ ಅಧಿಕಾರಿಗಳು, ಯಾವ ಯಾವ ಇಲಾಖೆಗಳಿಗೆ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ?

ಆ) ಇವರ ನಿಯೋಜನೆಯಿಂದ ಪೊಲೀಸ್ ಇಲಾಖೆಗೆ ತೊಂದರೆ ಆಗುತ್ತಿಲ್ಲವೆ? ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರ

ಅ) ಪೊಲೀಸ್ ಇಲಾಖೆಯ ಡಿಜಿಪಿ, ಎಡಿಜಿಪಿ, ಐಜಿಪಿ, ಡಿಐಜಿಪಿ, ಎಸ್‌ಪಿ, ಡಿವೈಎಸ್‌ಪಿ ಮತ್ತು ಪಿಐ ದರ್ಜೆಯ ಅಧಿಕಾರಿಗಳು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಕಾರಾಗೃಹ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಕೆ.ಪಿ.ಟಿ.ಸಿ.ಎಲ್. ಕೆ.ಎಸ್.ಆರ್.ಟಿ.ಸಿ. ಲೋಕಾಯುಕ್ತ ಬಿ.ಡಿ.ಎ. ಬಿ.ಎಂ.ಟಿ.ಎಫ್. ಮುಂತಾದ ಇಲಾಖೆ ಸಂಸ್ಥೆಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಇವರ ನಿಯೋಜನೆಯಿಂದ ಪೊಲೀಸ್ ಇಲಾಖೆಗೆ ಯಾವುದೇ ತೊಂದರೆಯಾಗುತ್ತಿಲ್ಲ. ಅಲ್ಲದೆ ಪೊಲೀಸ್ ಅಧಿಕಾರಿಗಳೇ ಅವಶ್ಯಕವೆಂದು ಕಂಡು ಬಂದ ಹುದ್ದೆಗಳಿಗೆ ಮಾತ್ರ ಪೊಲೀಸ್ ಅಧಿಕಾರಿಗಳನ್ನು ನಿಯೋಜನೆಯ ಮೇಲೆ ಕಳುಹಿಸಿಕೊಡಲಾಗುತ್ತದೆ. ಇಂತಹ ನಿಯೋಜನೆ ಮೇಲೆ ಕಳುಹಿಸಿದ ನಂತರ ಆ ಹುದ್ದೆಗಳನ್ನು ಇತರ ಅಧಿಕಾರಿಗಳಿಂದ ತುಂಬಿಕೊಳ್ಳಲಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಾನು ಕೇಳಿದ

ಮೊದಲನೆಯ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಎಸ್‌ಪಿ ಮತ್ತು ಡಿವೈಎಸ್‌ಪಿ, ಡಿಐಜಿ ಮತ್ತು ಐಜಿಪಿ ಇಂತಹ ಅಧಿಕಾರಿಗಳನ್ನು ನಾವು ಬೇರೆ ಕಡೆಗೆ ನಿಯೋಜಿಸಿದ್ದೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವರುಗಳನ್ನು ಪೋಲೀಸ್ ಇಲಾಖೆಯಿಂದ ಆಯ್ಕೆ ಮಾಡಿಕೊಂಡು ಬೇರೆ ಇಲಾಖೆಗಳಿಗೆ ನಿಯೋಜನೆ ಮೇರೆಗೆ ಕೊಡುವುದರಿಂದ ಅದು ಸಮಂಜಸವೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಕೆಪಿಟಿಸಿಎಲ್ ಮತ್ತು ಕೆಎಸ್‌ಆರ್‌ಟಿಸಿ ಮತ್ತು ಬಿಡಿಎ ಇಂತಹ ಇಲಾಖೆಗಳಿಗೆ ನಿಯೋಜನೆಯ ಮೇರೆಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಆದರೆ ಬೇರೆ ಇಲಾಖೆಯಿಂದ ಖಾಲಿಯಾದ ಹುದ್ದೆಗಳನ್ನೂ ಕೂಡ ತುಂಬುತ್ತೇವೆಂದು ಸಹ ಹೇಳಿದ್ದಾರೆ. ಅಂದರೆ ಆ ದಕ್ಷತೆ ಮತ್ತು ಬೇಸಿಕ್ ಆಗಿ ಆ ತರಬೇತಿ ಇರತಕ್ಕಂತಹ ಪೋಲೀಸ್ ಸರ್ವಿಸ್ ಎಂದು ನಾವು ಏನು ಕರೆಯುತ್ತೇವಲ್ಲಾ ಆ ಒಂದು ಪ್ರಮಾಣ ಬೇರೆ ಒಂದು ಇಲಾಖೆಯ ಅಧಿಕಾರಿಗಳಿಗೆ ಇರುತ್ತದೆಯೇ ಎನ್ನುವ ಬಗ್ಗೆ ತಾವು ತಿಳಿಸಬೇಕು. ಏಕೆಂದರೆ, ಪೋಲೀಸ್ ಇಲಾಖೆ ಬಹಳ ಮುಖ್ಯವಾದಂತಹ ಇಲಾಖೆಯಾಗಿದೆ, ರಾಜ್ಯದಲ್ಲಿ ಕೊಲೆ, ಸುಲಿಗೆ, ದರೋಡೆ ನಡೆದಾಗ ಮತ್ತು ಕಾನೂನು ಮತ್ತು ಸುವ್ಯವಸ್ಥೆಗೆ ತೊಂದರೆಯಾದಂತಹ ಸಂದರ್ಭದಲ್ಲಿ ಈ ಅಧಿಕಾರಿಗಳಿಗೆ ಇರತಕ್ಕಂತಹ ದಕ್ಷತೆ ಬೇರೆ ಇಲಾಖೆಯ ಅಧಿಕಾರಿಗಳಿಗೆ ಇರುತ್ತದೆಯೇ ಎಂಬುದನ್ನು ಮಾನ್ಯ ಗೃಹಮಂತ್ರಿಗಳು ಉತ್ತರದಲ್ಲಿ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯ ವತಿಯಿಂದ ಬೇರೆ ಇಲಾಖೆಗಳಿಗೆ ನಾವು ನಿಯೋಜನೆಯ ಮೇರೆಗೆ ಕೆಲವು ಅಧಿಕಾರಿಗಳನ್ನು ಕಳುಹಿಸಿದ್ದೇವೆ. ಅದರಲ್ಲಿ ಇರತಕ್ಕಂಥದ್ದು ಅಂದರೆ ಪ್ರಮುಖವಾಗಿ ಪ್ರಿಸೆನ್ಸ್ ಡಿಪಾರ್ಟ್‌ಮೆಂಟ್, ಅದು ಹೋಂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಿರುತ್ತದೆ. ಎಡಿಡಿಜಿಪಿಯನ್ನು ಕೆಪಿಟಿಸಿಎಲ್‌ಯಲ್ಲಾಗಲಿ, ಅಥವಾ ಹೈಕೋರ್ಟ್ ಸೆಕ್ಯೂರಿಟಿಯಲ್ಲಾಗಲಿ, ಅಥವಾ ಕೆಎಸ್‌ಆರ್‌ಟಿಸಿಗಾಗಲಿ, ಲೋಕಾಯುಕ್ತವಾಗಲಿ ಎಲ್ಲೆಲ್ಲಿ ಪೋಲೀಸರಿಗೆ ಕೆಲಸಗಳಿದೆ ಅಂತಹ ಕಡೆ ಸೆಕ್ಯೂರಿಟಿಯ ದೃಷ್ಟಿಯಿಂದಾಗಿ ಅಥವಾ ಅಲ್ಲಿ ಪೋಲೀಸರ ಅವಶ್ಯಕತೆ ಇದೆ ಎಂದು ಹೇಳಿ ಅಂತಹವರನ್ನು ಕೊಡಬೇಕೆಂದು ಹೇಳಿದಾಗ ಆ ಇಲಾಖೆಗಳಿಗೆ ನಾವು ಕೊಟ್ಟಿದ್ದೇವೆ. ಯೂನಿವರ್ಸಿಟಿಯಲ್ಲಿ ರಿಜಿಸ್ಟ್ರಾರ್ ಹುದ್ದೆಯಲ್ಲಿರತಕ್ಕಂತಹ ಒಂದು ಮೂರು ಸ್ಥಳಗಳನ್ನು ಬಿಟ್ಟರೆ, ಹೆಚ್ಚು ಕಡಿಮೆ ಎಲ್ಲಾ ಕಡೆಗಳಲ್ಲೂ ಪೋಲೀಸರು ಕೆಲಸ ಮಾಡತಕ್ಕಂಥಾದ್ದು ಇದೆ. ಅದರಲ್ಲಿ ದಕ್ಷತೆಯೂ ಕಡಿಮೆಯಾಗತಕ್ಕಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ ಲೋಕಾಯುಕ್ತದವರು ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ಗಳನ್ನು ಡಿವೈಎಸ್‌ಪಿ, ಎಸ್‌ಪಿಗಳನ್ನು ಕೇಳುತ್ತಿದ್ದಾರೆ. ಮತ್ತೆ ಕೆಪಿಟಿಸಿಟಿಎಲ್‌ನಲ್ಲಿಯೂ ಕೂಡ ವಿದ್ಯುತ್ ಕಳ್ಳತನವಾಗುತ್ತದೆ, ಅದಕ್ಕಾಗಿ ಅಲ್ಲಿ ವಿಜಿಲೆನ್ಸ್ ಮಾಡುವುದಕ್ಕಾಗಿ ಪೋಲೀಸರೇ ಬೇಕೆಂದು ಅವರೂ ಸಹ ಕೇಳುತ್ತಾರೆ. ಅದೇ ರೀತಿಯಾಗಿ ಕೆಎಟಿನಲ್ಲಿಯೂ ಕೂಡ ಪೋಲೀಸರು ಬೇಕೆಂದು ಕೇಳುತ್ತಾರೆ, ಹೈಕೋರ್ಟ್ ಸೆಕ್ಯೂರಿಟಿಯಲ್ಲಿಯೂ ಕೂಡ ಪೋಲೀಸರು ಬೇಕೆಂದು ಕೇಳುತ್ತಾರೆ, ಹೀಗೆ ಎಲ್ಲೆಲ್ಲಿ ಪೋಲೀಸರ

ಅವಶ್ಯಕತೆ ಇದೆ, ಅಲ್ಲಿ ನಾವು ನಿಯೋಜನೆಯ ಮೇರೆಗೆ ಕಳುಹಿಸಿಕೊಟ್ಟಿದ್ದೇವೆ. ನಾವು ಅನಾವಶ್ಯಕವಾಗಿ ಯಾವ ಜಾಗದಲ್ಲಿಯೂ ಕೂಡ ಪೋಲೀಸರನ್ನು ನಾವು ಹಾಕಿಲ್ಲ. ಒಂದೆರಡು ಜಾಗದಲ್ಲಿ ಕೆಲವು ಸಲ ಈ ಇಲಾಖೆಯಲ್ಲಿಯೂ ಕೂಡ ಯಾವಾಗ ಹೈಯರ್ ಲೆವೆಲ್‌ನಲ್ಲಿ ಒಂದೆರಡು ಕಡೆ ಪ್ರಮೋಷನ್ಸ್ ಬಂದಾಗ ಬೇರೆ ಇಲಾಖೆಗಳಿಗೂ ಕೂಡ ಕಳುಹಿಸಿದ್ದೇವೆ. ವಾರ್ತಾ ಮತ್ತು ಪ್ರಚಾರ ಇಲಾಖೆಗಳಾಗಲಿ, ಪ್ರವಾಸೋದ್ಯಮ ಇಲಾಖೆಯಾಗಲಿ, ವಿಶ್ವವಿದ್ಯಾನಿಲಯಗಳಾಗಲಿ ಇಂತಹ ಕಡೆ ಮಾತ್ರ ಕಳುಹಿಸಿಕೊಟ್ಟಿದ್ದೇವೆ. ಅದರಿಂದಾಗಿ ಕಾನ್ಸ್‌ಟೇಬಲ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ಲೆವೆಲ್‌ನಲ್ಲಿರತಕ್ಕಂತಹವರನ್ನು ನಾವು ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಿಯೂ ಕೂಡ ಕಳುಹಿಸಿಕೊಟ್ಟಿರುವುದಿಲ್ಲ. ಸುಮಾರು 60,000 ಸಾವಿರ ಪೋಲೀಸ್‌ರಲ್ಲಿ ಹೊರಗಡೆ ಕಳುಹಿಸಿರತಕ್ಕಂತಹ ಪೊಲೀಸರು ಕೇವಲ 136 ಮಾತ್ರ, 78 ಜನ ಹೆಡ್-ಕಾನ್ಸ್‌ಟೇಬಲ್‌ಗಳು, 10 ಪಿಎಸ್‌ಐಗಳು, ಬಿಟ್ಟರೆ ಮಿಕ್ಕಿದ ಎಲ್ಲರೂ ಕೂಡ ಎಲ್ಲೆಲ್ಲಿ ಅವಶ್ಯಕತೆ ಇರುತ್ತದೆ. ಅದಕ್ಕನುಗುಣವಾಗಿ ನಾವು ಕಳುಹಿಸಿರುತ್ತೇವೆ ಹೊರತಾಗಿ ಬೇರೆ ಯಾವುದೂ ಕೂಡ ಅನಾವಶ್ಯಕವಾಗಿ ಕಳುಹಿಸಿರುವುದಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಶ್ರೀ ಕರಡಿ ಸಂಗಣ್ಣನವರು ಬಹಳ ಉತ್ತಮವಾದಂತಹ ಪ್ರಶ್ನೆಯನ್ನು ಹಾಕಿದ್ದಾರೆ. ಅದಕ್ಕೆ ಬಂದಿರುವ ಉತ್ತರ ಅಷ್ಟು ಉತ್ತಮವಾಗಿಲ್ಲ. ಮಾನ್ಯ ಸಚಿವರು ಉತ್ತರದಲ್ಲಿ ಹೇಳುತ್ತಾರೆ. ಪೋಲೀಸ್ ಇಲಾಖೆಗೆ ತೊಂದರೆಯಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ, ಯಾವುದೇ ತೊಂದರೆಯಾಗುತ್ತಿಲ್ಲ. ಪೋಲೀಸ್ ಅಧಿಕಾರಿಗಳೇ ಅವಶ್ಯಕವೆಂದು ಕಂಡು ಬಂದ ಹುದ್ದೆಗಳಿಗೆ ಮಾತ್ರ ಪೋಲೀಸ್ ಅಧಿಕಾರಿಗಳನ್ನು ನಿಯೋಜನೆಯ ಮೇರೆಗೆ ಕಳುಹಿಸಿಕೊಡಲಾಗುತ್ತದೆ ಎಂದು. ಪೋಲೀಸ್ ಅಧಿಕಾರಿಯೇ ಹೋಗಿ ಅಲ್ಲಿ ಕೆಲಸ ಮಾಡಬೇಕೆಂದು ನಿಮಗೆ ಗೊತ್ತಾಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪೋಲೀಸ್ ಅಧಿಕಾರಿಯೇ ಅವಶ್ಯಕ ಎಂದು ತಾವು ಹೇಗೆ ಹೇಳುತ್ತೀರಿ? ವಾರ್ತಾ ಇಲಾಖೆಯಲ್ಲಿ ಪೋಲೀಸ್ ಅಧಿಕಾರಿಯೇ ಅಗತ್ಯವೆಂದು ಹೇಗೆ ಹೇಳುತ್ತೀರಿ? ಅಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆ ಮಟ್ಟಕ್ಕೆ ಬಂದು ಬಿಟ್ಟಿದೆಯೇ? ಪೋಲೀಸ್ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದರೆ ಮಾತ್ರ ಕನ್ನಡ ಮತ್ತು ಸಂಸ್ಕೃತಿಯನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವೆಂದು ಅನ್ನಿಸಿಬಿಟ್ಟಿದೆಯೇ? ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿದರೆ ಮಾತ್ರ ವಾರ್ತಾ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವೆಂದು ಅನ್ನಿಸುತ್ತದೆಯೇ ಈ ಬಗ್ಗೆ ನನಗೆ ಅನ್ನಿಸುತ್ತದೆ, ಇದು ಸದನವನ್ನು, ರಾಜ್ಯವನ್ನು ದಿಕ್ಕು ತಪ್ಪಿಸುವಂತಹ ಉತ್ತರವಾಗಿದೆ. ಪೋಲೀಸ್ ಅಧಿಕಾರಿಗಳೇ ಅವಶ್ಯಕವೆಂದು ಕಂಡು ಬಂದ ಹುದ್ದೆಗಳಿಗೆ ಮಾತ್ರ ಪೋಲೀಸ್ ಅಧಿಕಾರಿಗಳನ್ನು ನಿಯೋಜನೆಯ ಮೇರೆಗೆ ಕಳುಹಿಸಿಕೊಡಲಾಗುತ್ತದೆ, ಈ ಬಗ್ಗೆ ನನಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಅಯ್ಯೋ ಎಂದು ಅನ್ನಿಸುತ್ತದೆ, ಪೋಲೀಸರೇ ಬಂದು ಅಲ್ಲಿ ಕೆಲಸ ಮಾಡಿಸ ಬೇಕಾಗುತ್ತದೆ ಎಂದು ಅರ್ಥ ಬರುತ್ತದೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ನಿಮಗೆ ಯಾವ ಅಧಿಕಾರಿಗಳ ಮೇಲೆ ಕಣ್ಣು ಇದೆ, ಅಂತಹವರನ್ನು ಮಾತ್ರ

ಉಪಯೋಗವಿಲ್ಲವೆಂದು ಈ ಇಲಾಖೆಗೆ ಕಳುಹಿಸುತ್ತೀರಾ ಅಥವಾ ಅವರುಗಳೇ ಬೆಂಗಳೂರನ್ನು ಬಿಟ್ಟು ಬೇರೆ ಕಡೆಗೆ ಹೋಗುವುದಿಲ್ಲವೆಂಬ ಕಾರಣಕ್ಕಾಗಿ ಈ ಇಲಾಖೆಗಳಿಗೆ ಹೋಗುತ್ತಾರಾ! ಇಲ್ಲಿ ನಾನು ಕೆಲವು ಅಧಿಕಾರಿಗಳ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಅಧ್ಯಕ್ಷರು: ಮಾನ್ಯ ಸುರೇಶ್‌ಕುಮಾರ್‌ರವರೆ, ಇಲ್ಲಿ ಸಪ್ಲಿಮೆಂಟರಿಯನ್ನು ಕೇಳಿ, ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್.ಸುರೇಶ್‌ಕುಮಾರ್: ನಾನು ಕೇಳುತ್ತಿರುವುದು ಸಂಪ್ಲಿಮೆಂಟರಿಯನ್ನೇ, 4ರಿಂದ 6 ವರ್ಷಗಳವರೆಗೆ ಐಪಿಎಸ್ ಟ್ರೈನಿಂಗ್‌ನ್ನು ಪಡೆದುಕೊಂಡು ಅಥವಾ ಕೆಎಸ್‌ಪಿಎಸ್ ಟ್ರೈನಿಂಗ್‌ನ್ನು ಪಡೆದುಕೊಂಡು ಕನ್ನಡ ಮತ್ತು ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ಅದೊಂದು ತರಹ ಟ್ರೈಯಾಂಗಲ್ ಅಲ್ಲಿಯೇ ಓಡಾಡುತ್ತಿದ್ದಾರೆ. ಇದರ ಬಗ್ಗೆ ತಾವೇನು ಕ್ರಮವನ್ನು ತೆಗೆದುಕೊಳ್ಳುತ್ತೀರಾ? ದಯವಿಟ್ಟು ಈ ಬಗ್ಗೆ ಉತ್ತರವನ್ನು ಕೊಡಬೇಕು. ಇಲ್ಲಿ ಪೋಲೀಸ್ ಇಲಾಖೆಯವರೇ ಹೋಗಿ ಮಾಡುವಂತಹ ಕೆಲಸ ಏನಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲೆಲ್ಲಿ ಪೋಲೀಸರ ಅವಶ್ಯಕತೆ ಇದೆ ಅಂತಹ ಇಲಾಖೆಗಳಿಗೆ ಪೋಲೀಸರನ್ನು ಕಳುಹಿಸಿಕೊಟ್ಟಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ಪಟ್ಟಿಯಲ್ಲಿ ಓದಿ ಹೇಳಿದ್ದೇನೆ, ಕೆಪಿಟಿಸಿಎಲ್, ಲೋಕಾಯುಕ್ತ ಇರಬಹುದು, ಅದನ್ನು ಬಿಟ್ಟು ಎರಡು-ಮೂರು ಕಡೆ ಈ ರೀತಿಯಾಗಿ ಅಧಿಕಾರಿಗಳನ್ನು ಹಾಕಿದ್ದೇವೆ. ಅನೇಕ ಸಾರಿ ಪ್ರಮೋಷನ್‌ಗಳು ಬಂದಾಗ ಕೆಲವು ಕಡೆ ಜಾಗಗಳು ಇಲ್ಲದಿದ್ದಾಗ ಅಥವಾ ನಮಗೆ ಇಂತಹ ಅಧಿಕಾರಿಗಳು ಬೇಕು ಎಂದು ಇಲಾಖೆಯವರು ರಿಕ್ವಿಜಿಷನ್‌ನ್ನು ಕಳುಹಿಸಿಕೊಟ್ಟಾಗ ನಾವು ಕೊಟ್ಟಿದ್ದೇವೆ. ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ವಾರ್ತಾ ಇಲಾಖೆಗಳಿಗೆ ಏಕೆ ಕಳುಹಿಸಿದ್ದೀರಿ ಎಂದು ಹೇಳುತ್ತೀರಿ. ಅನೇಕ ಕಡೆಗಳಲ್ಲಿ ಐಎಎಸ್ ಆಫೀಸರ್ಸ್ ಹೋಗುವುದಿಲ್ಲವೇ? ಅವರೇನು ಕನ್ನಡ ಅಂಡ್ ಕಲ್ಚರ್‌ನಲ್ಲಿ ಬಹಳ ಫರ್‌ಫೆಕ್ಟ್ ಆಗಿ ಇರುತ್ತಾರ? ಈ ಬಗ್ಗೆ ಮಾತನಾಡುವುದಕ್ಕೆ ನನಗೂ ಸಹ ಅವಕಾಶವನ್ನು ಕೊಡಿ. ಮೇಜರ್ 99 ಪರ್ಸೆಂಟ್ ಎಲ್ಲಿ ಪೋಲೀಸರ ಅವಶ್ಯಕತೆ ಇದೆ, ಅಂತಹ ಇಲಾಖೆಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಒಂದೆರಡು ಕಡೆ ಈ ರೀತಿಯಾಗಿ ಆಗಿದೆ ಎಂದು ನಾನೇ ಹೇಳಿದ್ದೇನೆ, ಯೂನಿವರ್ಸಿಟಿಯಲ್ಲಿ ಮೂರು ಜನರನ್ನು ಕಳುಹಿಸಿದ್ದೇವೆ. ವಾರ್ತಾ ಇಲಾಖೆಗೆ ಒಬ್ಬರನ್ನು, 5-6 ಜಾಗಗಳನ್ನು ಬಿಟ್ಟರೆ ಬೇರೆ ಕಡೆ ಎಲ್ಲಿಯೂ ಕೂಡ ನಾವು ಹಾಕಿಲ್ಲ. ಇನ್ನು ಎರಡನೆಯದಾಗಿ ಹೇಳುವುದಾದರೆ ಪ್ರಮೋಷನ್ ಬಂದಾಗ, ಕೆಲವು ಕಡೆ ಸ್ಥಳವಿಲ್ಲದಿದ್ದಾಗ ಈ ಬಗ್ಗೆ ಡಿಪಿಎಆರ್‌ನವರು ಕೇಳುತ್ತಾರೆ, ಅಂತಹ ಕಡೆ ನಾವು ಕೊಡುತ್ತೇವೆ. ಇದು ಇವತ್ತೇ ಮಾಡಿರುವುದಲ್ಲ ಇದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ಪೋಲೀಸ್ ಇಲಾಖೆಯಲ್ಲಿಯೂ ಕೂಡ ಅನೇಕ ಜನ ಕನ್ನಡದಲ್ಲಿ ಆಸಕ್ತಿಯಿರತಕ್ಕಂತಹವರು, ಸಂಸ್ಕೃತಿಯಲ್ಲಿ ಆಸಕ್ತಿಯಿರತಕ್ಕಂತಹ ವ್ಯಕ್ತಿಗಳೂ ಕೂಡ ಹಿಂದೆ ಇದ್ದರು. ಈ ಬಗ್ಗೆ ತಮಗೆ ಗೊತ್ತಿದೆ, ಅವರು

ಅನೇಕ ಪುಸ್ತಕಗಳನ್ನೂ ಸಹ ಬರೆದಿದ್ದಾರೆ, ಲೇಖನಗಳನ್ನು ಸಹ ಬರೆದಿದ್ದಾರೆ. ಅಂತಹ ಜನರೂ ಕೂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ, ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಹೋಗಿ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಸಾರಸಗಟಾಗಿ ಐಪಿಎಸ್‌ನಲ್ಲಿರತಕ್ಕಂಥವರು, ಪೋಲೀಸ್ ಇಲಾಖೆಯಲ್ಲಿರತಕ್ಕಂಥವರು ಅವರು ಯಾವ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಅರ್ಹರಿಲ್ಲ ಎನ್ನತಕ್ಕಂಥ ವಾದ ತಮ್ಮದು ಇದ್ದರೆ, ಅದು ಸರಿಯಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಸಾರಸಗಟಾಗಿ ಎನ್ನುವ ವಾದ ನನ್ನದು ಅಲ್ಲ. ಅದು ನಿಮ್ಮ ಉತ್ತರ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವೇ ಇಲ್ಲ. ಈ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಎಲ್ಲಿ ಕೆಲವು ಇಲಾಖೆಗಳಲ್ಲಿ 100ಕ್ಕೆ 99 ಪರ್ಸೆಂಟ್ ಅವಶ್ಯಕತೆ ಇದೆ, ಅಂತಹ ಕಡೆ ಹಾಕಿದ್ದೇವೆ. ಒಂದೆರಡು ಕಡೆ ಮಾತ್ರ ಇಂತಹ ಒಂದು ಪೋಸ್ಟಿಂಗ್ಸ್‌ನ್ನು ಡಿಪಿಎಆರ್‌ರವರ ರಿಕ್ವೆಸ್ಟ್ ಮೇಲೆ ಅಥವಾ ಡಿಪಿಎಆರ್‌ರವರು ಇಲ್ಲಿಗೆ ಹಾಕಬೇಕೆಂದು ಹೇಳಿದಾಗ ಹಾಕಿದ್ದಾರೆ. ಇಲ್ಲಿ ನಾವು ಅನಾವಶ್ಯಕವಾಗಿ ಹಾಕಿದ್ದೇವೆ ಎನ್ನುವ ಮಾತನ್ನು ಹೇಳತಕ್ಕಂಥಾದ್ದು ಅಷ್ಟೊಂದು ಸರಿಯಲ್ಲ.

೧೧.೩೦ ಎ.ಎಂ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಂದ ಈ ರೀತಿಯಾದ ಉತ್ತರವನ್ನು ಕೇಳಿ ನನಗೆ ಬಹಳ ನೋವಾಯಿತು. ಮಾನ್ಯ ಸಚಿವರೇ ಹೇಳಿದಂತೆ, ಐಎಎಸ್ ಅಧಿಕಾರಿಗಳು ಬೇಕಾದ ಕಡೆ ಹೋಗಿ ಕೆಲಸವನ್ನು ಮಾಡುತ್ತಾರೆ, ಆ ರೀತಿಯಾಗಿ ಇವರು ಏತಕ್ಕಾಗಿ ಹೋಗಿ ಕೆಲಸವನ್ನು ಮಾಡಬಾರದು ಎನ್ನುವ ಅರ್ಥ ಬರುವ ಹಾಗೆ ಮಾತನಾಡಿದರು. ಐಎಎಸ್ ಅಧಿಕಾರಿಗಳನ್ನು ತೆಗೆದುಕೊಂಡು ಹೋಗಿ ಡಿಜಿಪಿ ಹಾಗೂ ಐಜಿ ಎಂದು ಹಾಕುವುದಕ್ಕೆ ಸಾಧ್ಯವಿದೆಯೇ? ಅವರಿಗೆ ವಿಶೇಷವಾದಂತಹ ತರಬೇತಿ ಇರುತ್ತದೆ, ಆ ದೃಷ್ಟಿಯಿಂದಾಗಿ ದಯವಿಟ್ಟು ತಾವು ಹೇಳಿದಂತೆ ಎಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ಹಾಕಿದ್ದೇವೆಂದು ಹೇಳಿದ್ದೀರಲ್ಲಾ, ಅವಶ್ಯಕತೆ ಇಲ್ಲದಂತಹವರನ್ನು ವಾಪಸ್ಸು ಕರೆಸಿಕೊಳ್ಳುತ್ತೀರಾ ಎನ್ನುವ ಬಗ್ಗೆ ತಾವು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಮೊದಲೇ ಹೇಳಿದ್ದೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿಯೇ ನಾವು ಹಾಕಿದ್ದೇವೆ. ಒಂದೆರಡು ಕಡೆ ಅಂದರೆ ಯೂನಿವರ್ಸಿಟಿಯಲ್ಲಾಗಲೀ, ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಾಗಲೀ, ಅಲ್ಲಿ ಕೇಳಿದಾಗ ಇಂತಹ ಅಧಿಕಾರಿಗಳು ಬೇಕೆಂದಾಗ ನಾವು ಹಾಕಿದ್ದೇವೆ. ಈಗ ಶ್ರೀ ವಿ.ವಿ.ಭಾಸ್ಕರ್, ಡಿಜಿ ಮತ್ತು ಐಜಿಪಿ ಇದ್ದಾರೆ, ಅವರು ಹಿಂದೆ ಬೆಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್

ಆಗಿದ್ದರು, ಅವರು ನನ್ನ ಕಾಲದಲ್ಲಿ ರಿಜಿಸ್ಟ್ರಾರ್ ಆಗಿದ್ದರಾ? ಇದು 10-15 ವರ್ಷಗಳ ಹಿಂದೆ ಆಗಿದೆ. ವಿದ್ಯಾರ್ಥಿಗಳ ಡಿಸಿಪ್ಲಿನ್ ಎಂದು ಬಂದಾಗ ಕೊನೆಗೆ ಐಪಿಎಸ್ ಇರಬಹುದು, ಜೊತೆಯಲ್ಲಿ ಡಿಸಿಪ್ಲಿನ್ ಇಡುವ ಬಗ್ಗೆಯೂ ಕೂಡ ಅವರ ಅವಶ್ಯಕತೆ ಇದೆ ಎಂದು ಕಂಡು ಬಂದಾಗ, ಆ ಕಾಲದಲ್ಲಿ ಆಡಳಿತದ ದೃಷ್ಟಿಯಿಂದ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ಅದು ಕಾನೂನು ಬಾಹಿರವೇನೂ ಅಲ್ಲ ಅದಕ್ಕಾಗಿ ದಯವಿಟ್ಟು ಒಂದಕ್ಕೊಂದು ಹೋಲಿಸುವುದಕ್ಕೆ ಹೋಗಬೇಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಗೃಹಮಂತ್ರಿಗಳು ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಟ್ಟಿದ್ದೇವೆಂಬ ಮಾತನ್ನು ಏನು ಹೇಳಿದ್ದಾರೆ ಅದನ್ನು ನಾವೂ ಕೂಡ ಒಪ್ಪುತ್ತೇವೆ. ತಾವು ಹೇಳಿದ ಹಾಗೆ ಒಂದೆರಡು ಇಲಾಖೆಗಳಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ, ಯೂನಿವರ್ಸಿಟಿ ಲೆವೆಲ್‌ನಲ್ಲಿ ಕೊಟ್ಟಿದ್ದಾರೆಂದು ಹೇಳಿದ್ದಾರೆ, ಅವರನ್ನು ಪುನಃ ವಾಪಸ್ಸು ಕರೆಸಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೀರಾ? ಇಲ್ಲಿ ಖಾಲಿಯಾದ ಹುದ್ದೆಯನ್ನು ನೀವು ಬೇರೆ ಇಲಾಖೆಯಿಂದ ನಿಯೋಜಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದೀರಿ, ಆ ಒಂದು ದಕ್ಷತೆ ಮತ್ತು ತರಬೇತಿ ಹೊಂದಿದವರ ಹಾಗೆ ಯಾವುದೇ ಒಂದು ಕ್ಲಿಷ್ಟ ಪರಿಸ್ಥಿತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವಂತಹ ಬೇರೆ ಇಲಾಖೆಯಿಂದ ಬಂದವರು ಇಲ್ಲಿ ಸಮರ್ಥರಾಗುತ್ತಾರಾ ಎನ್ನುವ ಬಗ್ಗೆಯೂ ಕೂಡ ತಾವು ಉತ್ತರವನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬೇರೆಯವರು ನಮ್ಮ ಇಲಾಖೆಗೆ ಬರುವ ಬಗ್ಗೆ ಆ ಪ್ರಶ್ನೆ ಉದ್ಭವಿಸುವುದಿಲ್ಲ ಇಲ್ಲಿರತಕ್ಕಂಥವರನ್ನು ನಾವು ಕೊಡುತ್ತೇವೆ, ಎಲ್ಲೆಲ್ಲಿ ಸರ್‌ಪ್ಲಸ್ ಇದ್ದಾಗ ಕೆಲವು ಸಲ ಸಡನ್ ಆಗಿ ಫಾರೆನ್‌ಗೆ ಡೆಪ್ಯುಟೇಷನ್ ಹೋಗಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ನಾವು ಕಾನ್ಸ್‌ಟೇಬಲ್, ಸಬ್‌ಇನ್ಸ್‌ಪೆಕ್ಟರ್ ಹಾಗೂ ಇನ್ಸ್‌ಪೆಕ್ಟರ್‌ಗಳ ಲೆವೆಲ್‌ನಲ್ಲಿ ಅಲ್ಲಿ ಕಾನೂನು ವ್ಯವಸ್ಥೆಯನ್ನು ಮಾಡುವುದಕೋಸ್ಕರ ಅವರ ಅವಶ್ಯಕತೆ ಬಹಳ ಇದೆ, ಆ ಜಾಗಗಳನ್ನು ನಾವು ತುಂಬಬೇಕಾಗುತ್ತದೆ, ಅಲ್ಲಿರತಕ್ಕಂತಹವರನ್ನು ಹೆಚ್ಚಿನ ರೀತಿಯಲ್ಲಿ ಹೊರಗಡೆ ಕಳುಹಿಸತಕ್ಕಂಥಾದ್ದು ಮತ್ತು ಬೇರೆ ಕೆಲಸದ ಕಡೆಗೆ ಕಳುಹಿಸತಕ್ಕಂಥಾದ್ದು ಸರಿಯಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಉನ್ನತಮಟ್ಟದಲ್ಲಿ ಒಂದೊಂದು ಸಲ ಈ ಅಡೆತಡೆಗಳು ಬಂದಾಗ ಅದನ್ನು ಡಿಪಿಎಆರ್‌ನವರು ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಅವರು ನೋಡಿಕೊಂಡು ಹಾಕುತ್ತಾರೆ. ಈ ರೀತಿಯಾಗಿ ಒಂದೆರಡು ಕೇಸ್‌ಗಳಲ್ಲಿ ಮಾಡಿದ್ದಾರೆಯೇ ಹೊರತಾಗಿ ಸಾರಾಸಗಟಾಗಿ ಈ ಇಲಾಖೆಯನ್ನು ನಿರ್ಲಕ್ಷ್ಯ ಮಾಡಿ ನಾವು ಎಂದೂ ಕೂಡ ಮಾಡಿಲ್ಲ. ನಾವು ಆದಷ್ಟು ಆಡಳಿತದ ದೃಷ್ಟಿಯಿಂದಾಗಿ ಹೆಚ್ಚಾಗಿ ಕಾನ್ಸ್‌ಟೇಬಲ್ ಲೆವೆಲ್‌ನಲ್ಲಿ, ಇನ್ಸ್‌ಪೆಕ್ಟರ್ ಲೆವೆಲ್‌ಗಳ ಜಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಇವತ್ತು ಏನು ಕೊರತೆಗಳಿವೆ ಅದನ್ನು ತುಂಬತಕ್ಕಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ನಾವು ಅದನ್ನು ಸರಿಪಡಿಸುತ್ತೇವೆ, ಒಂದು ವೇಳೆ

ನಿಯೋಜನೆಯ ಮೇರೆಗೆ ಹೋದವರನ್ನು ಇಲಾಖೆಗೆ ಅವರ ಅವಶ್ಯಕತೆ ಇದ್ದರೆ ಅವರನ್ನು ವಾಪಸ್ಸು ಕರೆಸಿಕೊಳ್ಳುವಂತಹ ಕೆಲಸವನ್ನು ನಾವು ಅಂತಹ ಸಮಯ ಬಂದಾಗ ಮಾಡುತ್ತೇವೆ.

ಬಸವನಬಾಗೇವಾಡಿಯಲ್ಲಿ 33 ಕೆ.ವಿ. ಸಬ್‌ಸ್ಟೇಷನ್ ನಿರ್ಮಾಣ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 79(304)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ)

ಪ್ರಶ್ನೆ

ಅ. ಬಸವನಬಾಗೇವಾಡಿಯಲ್ಲಿನ ಮನಗೂಳಿಯಲ್ಲಿ 33 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣದ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಆ. ಈ ಯೋಜನೆಗೆ ನಿಗದಿ ಪಡಿಸಿರುವ ಹಣ ಎಷ್ಟು? ಈ ಯೋಜನೆಯನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಉತ್ತರಿಸಲಿರುವ ಸಚಿವರು: ಶ್ರೀ ವೀರಕುಮಾರ್ ಅ.ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ. ಮನಗೂಳಿಯಲ್ಲಿ ಒಂದು 33:11 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣ ಮಾಡಲು ನಿಗಮದ ತಾಂತ್ರಿಕ ಸಮಿತಿ ಅನುಮೋದಿಸಿದೆ. ಆಡಳಿತಾತ್ಮಕ ಮಂಜೂರಿ ದೊರೆಯ ಬೇಕಾಗಿದೆ ಮತ್ತು ಭೂ ಸ್ವಾಧೀನ ಕ್ರಿಯೆ ಪ್ರಗತಿಯಲ್ಲಿದೆ.

ಆ. ಈ ಯೋಜನೆಯ ಅಂದಾಜು ವೆಚ್ಚ ರೂ.180 ಲಕ್ಷ ಆಡಳಿತಾತ್ಮಕ ಮಂಜೂರಾತಿ ಮತ್ತು ಆರ್ಥಿಕ ವ್ಯವಸ್ಥೆ ಆದ ನಂತರ ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು, ಆಡಳಿತಾತ್ಮಕ ಮಂಜೂರಾತಿ ದೊರೆಯಬೇಕಾಗಿದೆ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ 6 ತಿಂಗಳ ಹಿಂದೆ ಸಂಬಂಧಪಟ್ಟ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಜಮೀನು ಮಾಲೀಕರಿಗೆ ಹಣವನ್ನು ಕೊಡಲಾಗಿದೆ. ದಯವಿಟ್ಟು ಅಲ್ಲಿರತಕ್ಕಂತಹ ವಿದ್ಯುತ್ ತೊಂದರೆಯನ್ನು ನೀಗಿಸುವ ಸಲುವಾಗಿ ಬರುವ ಏಪ್ರಿಲ್‌ನಲ್ಲಿ ಆ ಒಂದು ಕೆಲಸವನ್ನು ಟೆಂಡರ್ ಮೂಲಕವಾಗಿ ತೆಗೆದುಕೊಂಡು ಅದನ್ನು ಪೂರ್ಣ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಇಂಧನ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.